ಇಂದು ದಿನಾಂಕ 04-07-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲುಃ ಡಿ.ಹೆಚ್. ಪರವಾಗಿಃ ಶ್ರೀ ಪಿ.ಜಿ.ಹೆಚ್. ವಕೀಲರಿಂದಃ</u>**

ಈ ಪ್ರಕರಣದಲ್ಲಿ ಅರ್ಜಿ ಹಾಕಲು ಮಾಹಿತಿಯನ್ನು ನಾನು ಹಾಗೂ ನನ್ನ ತಂದೆ ಕೊಟ್ಟಿರುತ್ತೇವೆ . ನನ್ನ ತಂದೆ ವಕೀಲರ ಆಫೀಸ್‌ಗೆ ಬಂದು ಮಾಹಿತಿ ಕೊಟ್ಟಿರುತ್ತಾರೆ ಎಂದರೆ ಸರಿ. ನಮ್ಮ ವಾಸ್ತವ್ಯ ಕೋರ್ಟಿನಿಂದ ಅರ್ಧ ಕಿಲೋ ಮೀಟರ ಅಂತರದಲ್ಲಿ ಇದೆ ಎಂದರೆ ಸರಿ . ನನ್ನ ತಂದೆ ಓಡಾಡುವುದಿಲ್ಲ , ಮನೆಯಲ್ಲಿಯೇ ಇರುತ್ತಾರೆ. ನನ್ನ ತಂದೆ ನನಗೆ ಮೊಕ್ತ್ಯಾರುನಾಮೆ ಬರೆದುಕೊಡುವಾಗ ವಕೀಲರ ಕಚೇರಿಗೆ ಬಂದಿದ್ದರು. ನನ್ನ ತಂದೆ ಆಟೋದಲ್ಲಿ ಕೋರ್ಟಿಗೆ ಬಂದು ಸಾಕ್ಷ್ಯ ನುಡಿಯುವಷ್ಟು ಆರೋಗ್ಯವಾಗಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿದಿದರೆ ನಿಜ ಸಂಗತಿ ಗೊತ್ತಾಗುತ್ತದೆ, ಕಾರಣ ನಾನು ಮೊಕ್ತ್ಯಾರುನಾಮೆ ಪಡೆದುಕೊಂಡು ಬಂದಿದ್ದೇನೆ ಎಂದರೆ ಸರಿಯಲ್ಲ . ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿಯಲು ನನ್ನ ತಂದೆಯೇ ಯೋಗ್ಯವಾದ ವ್ಯಕ್ತಿ ಎಂದರೆ ಸಾಕ್ಷಿ ಅವರಿಗೆ ಬಿ .ಪಿ. ಶುಗರ್ ಇದೆ, ಹೆಚ್ಚಿನ ನೆನಪಿನ ಶಕ್ತಿ ಇಲ್ಲ, ಕಾಲು ನೋವಿದೆ ಎಂದು ನುಡಿದಿರುತ್ತಾರೆ.

ಈ ಪ್ರಕರಣದಲ್ಲಿ ಹಾಜರುಪಡಿಸಿದ ಎಲ್ಲಾ ದಾಖಲಾತಿಗಳನ್ನು ಓದಿ ತಿಳಿದುಕೊಂಡಿದ್ದೇನೆ. ಪ್ರಕರಣ ದಾಖಲಾಗುವ ಪೂರ್ವದಲ್ಲಿ ನಮ್ಮ ಕುಟುಂಬದ ಆಸ್ತಿಗಳ ಕುರಿತು ದಾಖಲಾತಿಗಳನ್ನು ತೆಗೆಸಿ ಪರಿಶೀಲಿಸಿ ನೋಡಿದ್ದೇನೆ . ದಾಖಲಾತಿ ನೋಡಿದ್ದೇನೆ, ರೆಕಾರ್ಡಿನಲ್ಲಿ 00-7-02 ಎಂದು ಇದೆ. ಅವರ ರೆಕಾರ್ಡಿನಲ್ಲೂ ಕೂಡ 0-7-02 ಇದೆ, ಆದರೆ ರೆಕಾರ್ಡಿನಲ್ಲಿ 0-26-0 ಕಾಣಿಸುತ್ತಿದೆ. ಸ.ನಂ. 126 ರಲ್ಲಿ 0-26-0 ತೋರಿಸುತ್ತಿದೆ. ಇರುವುದು 0-20-0 ಆದರೆ ಅದರಲ್ಲಿ 0-1-0 ಖರಾಬ ಇದೆ. 0-19-0 ಪಾಲು ಹಂಚಿಕೊಂಡಿದ್ದಾರೆ.

ಲಕ್ಷ್ಮೀ ಶಿವಪ್ಪ ನಾಯ್ಕ ಇವರು ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 8/2020 ನ್ನು ದಾಖಲಿಸಿದ ಬಗ್ಗೆ ನಮಗೆ ಮಾಹಿತಿ ಇಲ್ಲ, ನಮಗೆ ಯಾವುದೇ ನೋಟಿಸ್ ಬಂದಿಲ್ಲ. ಲಕ್ಷ್ಮೀ ಶಿವಪ್ಪ ನಾಯ್ಕ ಹಾಗೂ ನಮ್ಮ ಮನೆ ಒಂದೇ ಕೇರಿಯಲ್ಲಿದೆ ಎಂದರೆ ಸರಿ. ಮನೆಗಳು ಒಂದಕ್ಕೊಂದು ತಾಗಿಕೊಂಡು ಇವೆ ಎಂದರೆ ಸರಿಯಲ್ಲ . ಸ.ನಂ. 126 ಇದು ಮೂಲತಃ ನಮ್ಮ

ಕುಟುಂಬಕ್ಕೆ ಬಂದಿದ್ದು ಮಾಹಿತಿ ಇದೆ, ಅದು ಭೂನ್ಯಾಯಮಂಡಳಿಯಿಂದ ಬಂದಿರುತ್ತದೆ. ಸಾಕ್ಷಿ ಸ್ವತಃ ಅದಕ್ಕಿಂತ ಮುಂಚೆ ನಮ್ಮ ಮನೆ ಅಲ್ಲಿ ಇತ್ತು ಎಂದು ನುಡಿದಿರುತ್ತಾರೆ. ಭೂನ್ಯಾಯಮಂಡಳಿಯಿಂದ ಮಂಜೂರಾಗುವ ಪೂರ್ವದಲ್ಲಿ ಯಾರು ಯಾರು ಎಷ್ಟು ಎಷ್ಟು ಕಬಜಾ ಸಾಗುವಳಿ ಮಾಡುತ್ತಿದ್ದರು ಗೊತ್ತು . ನಾಲ್ಕೂ ಕವಲಿನವರು 0-4-12 ರಂತೆ ಪಾಲು ಮಾಡಿಕೊಂಡಿದ್ದರು. ನಮ್ಮ ಕುಟುಂಬದ ಮೂಲ ಪುರುಷ ನಾಗಪ್ಪ ನಾಯ್ಕ. ಅವರಿಗೆ 5 ಜನ ಮಕ್ಕಳು. 4 ಜನ ಆಸ್ತಿಯನ್ನು ಪಾಲು ಹಂಚಿಕೊಂಡಿರುತ್ತಾರೆ. 5 ನೇಯವರು ವೆಂಕಟಪ್ಪ ನಾಯ್ಕ ಎಂದು ಇರುತ್ತಾರೆ . ಆ 5 ಜನರಲ್ಲಿ ಕುಟುಂಬದ ಆಸ್ತಿಗಳ ಕುರಿತು ವಾಂಟಣಿಯಾಗಿಲ್ಲ, ಆದರೆ ಭೂನ್ಯಾಯ ಮಂಡಳಿಯಲ್ಲಿ ತೀರ್ಮಾನ ಆಗಿರುತ್ತದೆ. ನನ್ನ ಅಜ್ಜನ ಹೆಸರು ಹೊಸಬಯ್ಯ. ಹೊಸಬಯ್ಯ ಇವರಿಗೆ 3 ಜನ ಮಕ್ಕಳು. ನನ್ನ ತಂದೆ ಶ್ರೀಧರ, ಇಬ್ಬರು ಅಕ್ಕಂದಿರು ಮಹಾದೇವಿ ಹಾಗೂ ನಾಗಮ್ಮ. ಮಹಾದೇವಿ ಹಾಗೂ ನಾಗಮ್ಮರವರನ್ನು ಅರ್ಜಿದಾರರನ್ನಾಗಿ ಸೇರಿಸಿಲ್ಲ, ಅವರಿಬ್ಬರು 2015 ರಲ್ಲಿ ನಮ್ಮ ತಂದೆಗೆ ಆಸ್ತಿಯನ್ನು ಮಾಡಿಕೊಟ್ಟಿದ್ದಾರೆ. ಆ ಬಗ್ಗೆ ನೋಂದಾಯಿತ ದಾಖಲೆ ಇದೆ . ಆ ದಾಖಲಾತಿ ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ವಾಂಟಣಿ ಮಾಡಿಕೊಟ್ಟಿದ್ದಾರೆ.

ನಾಗಪ್ಪ ನಾಯ್ಕ ಇವರ 5 ಮಕ್ಕಳನ್ನು ಅರ್ಜಿದಾರರನ್ನಾಗಿ ಸೇರಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಅವರಿಗೆ ಪಾಲು ಇಲ್ಲ ಎಂದು ನುಡಿದಿರುತ್ತಾರೆ. ನನ್ನ ತಂದೆ ಭೂಸುಧಾರಣಾ ಕಾಯಿದೆ ಬರುವ ಪೂರ್ವದಲ್ಲಿ ಸ.ನಂ. 126 ರಲ್ಲಿ 0-4-12 ಕಬಜಾ ಸಾಗುವಳಿ ಮಾಡುತ್ತಿದ್ದರು. ಈಗಿನ ಪಹಣಿಪತ್ರಿಕೆಯಲ್ಲಿ ಹೊಸಬಯ್ಯ ನಾಯ್ಕ ಇವರ ವಾರಿಸುದಾರರಿಗೆ 0-7-2 ಇದೆ. ಭೂ ಸುಧಾರಣಾ ಆದೇಶದಲ್ಲಿ ಎಲ್ಲರಿಗೂ 0-4-12 ತೀರ್ಮಾನ ಆಗಿದೆ. ನಾಲ್ಕೂ ಕವಲಿನವರು ಅರ್ಜಿ ಹಾಕಿದ್ದರು, ಮುರು ಕವಲಿನವರಿಗೆ ತಲಾ 0-4-12 ಆಗಿದೆ. ನಾವು ಕಬಜಾದಲ್ಲಿ ಇರುವುದು 0-4-12, ಆದರೆ 0-19-0 ಸಾಮಾಹಿಕದಲ್ಲಿದೆ. ಈಗಿನ ಪಹಣಿಪತ್ರಿಕೆಯ ಸ.ನಂ. 126 ರಲ್ಲಿ ನನ್ನ ತಂದೆಯ ಹೆಸರಿನ ಮುಂದೆ 0-7-2 ತೋರಿಸುತ್ತಿರುವುದು ತಪ್ಪು ಎಂದರೆ ಸರಿ. ನಾಲ್ಕೂ ಕವಲಿನವರು ಭೂನ್ಯಾಯ ಮಂಡಳಿಗೆ ಪ್ರತ್ಯೇಕವಾದ ಫಾರ್ಮಗಳನ್ನು ತುಂಬಿದ್ದರು. ಭೂನ್ಯಾಯಮಂಡಳಿಯ ತೀರ್ಮಾನದ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಮಾರು ನಾಗಪ್ಪ ನಾಯ್ಕ ಇವರಿಗೆ 0-4-12 ಗೆ ಆದೇಶವಾಗಿರುತ್ತದೆ. ಸ.ನಂ. 126 ರ ಭೂಮಾಲಿಕರ ಒಡೆಯರ ಹೆಸರು ಗೊತ್ತಿಲ್ಲ. ನಾರಾಯಣ ನಾಗಪ್ಪ ನಾಯ್ಕ ಇವರು 0-4-12 ಗೆ ಅರ್ಜಿಯನ್ನು ತುಂಬಿದ್ದರು. ತಿಮ್ಮಣ್ಣ ನಾಗಪ್ಪ ನಾಯ್ಕ ಇವರು ಸ .ನಂ. 126 ಕುರಿತಂತೆ 0-4-12 ಕ್ಲೇಮ್ ಮಾಡಿದ್ದರು. ಅವರಿಗೆ

ತೀರ್ಮಾನ ಎಷ್ಟಾಗಿದೆ ತಿಳಿದುಕೊಂಡಿದ್ದೇನೆ, ಅವರಿಗೂ ಕೂಡ 0–4–12 ಆದೇಶವಾಗಿದೆ. ಪಹಣಿಯಲ್ಲಿ 0–7–2 ಆದ ಬಗ್ಗೆ ಗೊತ್ತಿರಲಿಲ್ಲ, ಕಾರಣ ಕಾನೂನು ಕ್ರಮ ಕೈಗೊಂಡಿಲ್ಲ. ಭೂಸುಧಾರಣೆಯಂತೆ ಆದ ತೀರ್ಮಾನದ ಪ್ರಕಾರ ಪಹಣಿಯಲ್ಲಿ ತಪ್ಪಾಗಿದೆ ಎಂದು ಸಹಾಯಕ ಕಮೀಷನರ್ ಇವರ ಮುಂದೆ ಮ್ಯುಟೇಶನ್ ಪ್ರಶ್ನಿಸಿ ಅರ್ಜಿ ಸಲ್ಲಿಸಲು ಅವಕಾಶ ಇತ್ತು ಎಂದರೆ ಸಾಕ್ಷಿ ನಾವು 2022 ರಲ್ಲಿ ಅರ್ಜಿ ಮಾಡಿದ್ದೇವ, ಆದರೆ ಮೇಲ್ಮನವಿ ಸಲ್ಲಿಸಿಲ್ಲ ಎಂದು ನುಡಿದಿರುತ್ತಾರೆ.

**(ಈ ಹಂತದಲ್ಲಿ ಡಿ .ಹೆಚ್ಆರ್. ಪರ ವಕೀಲರ ವಿನಂತಿ ಮೇರೆಗೆ ಮುಂದುವರಿದ ಪಾಟೀ ಸವಾಲು ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾದಂ.

ಕುಮಟಾ